**ಇ.ಎಕ್ಸ್. ನಂಃ 51/2023**

**ಪಿ.ಡಬ್ಲ್ಯೂಃ 1**

**ದಿನಾಂಕ 20.09.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ತೀರ್ಪುಋಣಿದಾರರ ಪರ ಶ್ರೀ.ಕೆ.ವಿ.ಎಮ್. ವಕೀಲರಿಂದಃ**

1. ನಾನು ಬಿ.ಎಸ್.ಸಿ. ಪದವೀದರನಾಗಿದ್ದು, ನಿವೃತ್ತ ಸರ್ಕಾರಿ ನೌಕರನಾಗಿರುತ್ತೇನೆ. ಈ ಅರ್ಜಿಯಲ್ಲಿ ನಾನು ಏನು ಪರಿಹಾರ ಕೇಳಿರುತ್ತೇನೆ ಎಂದು ನನಗೆ ಗೊತ್ತಿದೆ. ನನಗೆ ಕೇವಲ 1 ನೇ ತೀರ್ಪುಋಣಿದಾರರ ಪರಿಚಯ ಮಾತ್ರ ಇದ್ದು, 2 ನೇ ತೀರ್ಪುಋಣಿದಾರರ ಪರಿಚಯ ನನಗೆ ಇಲ್ಲ. ತೀರ್ಪುಋಣಿದಾರರು ನನಗೆ ತೊಂದರೆ ಕೊಟ್ಟಿರುತ್ತಾರೆ ಎಂದು ನಾನು ಅವರ ವಿರುದ್ಧ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. 1 ನೇ ತೀರ್ಪುಋಣಿದಾರರು ನನಗೆ 40X60 ಅಡಿ ವಿಸ್ತೀರ್ಣ ನಿವೇಶನ ಮಾರಾಟ ಮಾಡುವುದಾಗಿ ಹೇಳಿ ನನಗೆ ಅದಕ್ಕಿಂತ ಕಡಿಮೆ ವಿಸ್ತೀರ್ಣದ ನಿವೇಶನ ಮಾರಾಟ ಮಾಡಿರುತ್ತಾರೆ ಎಂದು 1 ನೇ ತೀರ್ಪುಋಣಿದಾರರ ವಿರುದ್ದ ನಾನು ಪೋಲಿಸ್ ಠಾಣೆಯಲ್ಲಿ ದೂರನ್ನುನೀಡಿರುತ್ತೇನೆ. ನಾನು ತೀರ್ಪುಋಣಿದಾರರ ವಿರುದ್ದ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುವ ಬಗ್ಗೆ ದಾಖಲೆಗಳನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

2. ನಾನು ಅಸಲು ದಾವೆ ಸಂಖ್ಯೆ 60/2022 ರ ದಾವೆಯನ್ನು ಹೂಡುವ ಕಾಲಕ್ಕೆ 2 ನೇ ತೀರ್ಪುಋಣಿದಾರರಿಗೆ ರಸ್ತೆ ಅಪಘಾತವಾಗಿ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. 2 ನೇ ತೀರ್ಪುಋಣಿದಾರರು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದರು ಸಹ ನಾನು ವಿನಾಕಾರಣ ಅವರ ವಿರುದ್ಧ ಅಸಲು ದಾವೆ ಸಂಖ್ಯೆ 60/2022 ರ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

3. ಅಸಲು ದಾವೆ ಸಂಖ್ಯೆ 60/2022 ರ ದಾವೆಯನ್ನು ಮರು ಸ್ಥಾಪಿಸಲು 2 ನೇ ತೀರ್ಪುಋಣಿದಾರರು ಇದೇ ನ್ಯಾಯಾಲಯದಲ್ಲಿ Misc No.21/2024 ರಂತೆ

ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. Misc No.21/2024 ಇದು ಇದೇ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ ಎಂದರೆ ಸರಿ. 2 ನೇ ತೀರ್ಪುಋಣಿದಾರರು ಯಾವುದೇ ತಪ್ಪು ಮಾಡದಿದ್ದರು ಸಹ ಕೇವಲ ದಾವಾ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ನಾನು 2 ನೇ ತೀರ್ಪುಋಣಿದಾರರ ವಿರುದ್ಧ ವಿನಾಕಾರಣ ಅಸಲು ದಾವೆ ಸಂಖ್ಯೆ 60/2022 ರ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು 1 ನೇ ತೀರ್ಪುಋಣಿದಾರರು ಶಾಮಿಲಾಗಿ 2 ನೇ ತೀರ್ಪುಋಣಿದಾರರ ವಿರುದ್ಧ ಈ ಸುಳ್ಳು ಅರ್ಜಿಯನ್ನು ಹೂಡಿರುತ್ತೇವೆ ಎಂದರೆ ಸರಿಯಲ್ಲ.

4. 1 ನೇ ತೀರ್ಪುಋಣಿದಾರರು ನನಗೆ 40X60 ಅಡಿ ವಿಸ್ತೀರ್ಣದ ನಿವೇಶನ ಮಾರಾಟ ಮಾಡುವುದಾಗಿ ಹೇಳಿ ನನಗೆ ಅದಕ್ಕಿಂತ ಕಡಿಮೆ ವಿಸ್ತೀರ್ಣದ ನಿವೇಶನ ಮಾರಾಟ ಮಾಡಿರುತ್ತಾರೆ ಎಂದು 1 ನೇ ತೀರ್ಪುಋಣಿದಾರರ ವಿರುದ್ಧ ನಾನು ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿರುತ್ತೇನೆ. ಆ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹೇಳಿದ ಹಾಗೆ 1 ನೇ ತೀರ್ಪುಋಣಿದಾರರ ವಿರುದ್ಧ ಆ ರೀತಿ ಯಾವುದೇ ದಾವೆಯನ್ನು ಹೂಡದಿದ್ದರು ಸಹ ಹೂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**